# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

ಸ್ಥಾಪನೆ : ೧೯೧೫

## ಕನ್ನಡ ಪ್ರವೇಶ ಪರೀಕ್ಷೆ – ೨೦೨೪

**ಪ್ರಶ್ನೆಪತ್ರಿಕೆ – ೧**

## ಅಕ್ಷರ, ಪದ, ವಾಕ್ಯರಚನೆ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ**

ಅ. ಕನ್ನಡ ಅಕ್ಷರ ಮಾಲೆಯನ್ನು ಬರೆಯಿರಿ. ಅನುನಾಸಿಕಾಕ್ಷರಗಳು ಎಂದರೇನು? ೧೦

ಆ. ವಾಕ್ಯ ಎಂದರೇನು? ವಾಕ್ಯದ ಬಗೆಗಳಲ್ಲಿ ಮೂರನ್ನು ಉದಾಹರಣೆಯೊಂದಿಗೆ ವಿವರಿಸಿ. ೧೦

ಇ. ಕಾಗುಣಿತ ಎಂದರೇನು? ಚ, ಫ, ಹ. ಳ. ಬ ಈ ಅಕ್ಷರಗಳ ಕಾಗುಣಿತ ಅಕ್ಷರಗಳ ಮಾಲೆಯನ್ನು ಬರೆಯಿರಿ ೧೦

ಈ. ಹ್ರಸ್ವಸ್ವರ ಮತ್ತು ದೀರ್ಘಸ್ವರಗಳೆಂದರೇನು? ತಲಾ ಐದು ಪದಗಳನ್ನು ಬರೆಯಿರಿ. ೧೦

ಉ. ಕರ್ಮಪದ, ಕರ್ತೃಪದ ಮತ್ತು ಕ್ರಿಯಾಪದಗಳೆಂದರೇನು? ಸಂಯುಕ್ತಾಕ್ಷರ ಎಂದರೇನು? ಉದಾಹರಣೆಯೊಂದಿಗೆ ವಿವರಿಸಿ ೧೦

**II ೧. ಯಾವುದಾದರೂ ಐದು ಪದಗಳಿಗೆ ಅರ್ಥ ಬರೆಯಿರಿ. ೧x೫=೫**

ಅ) ಜಗಿ ಆ) ಸರಪಣಿ ಇ) ಕುಲಾವಿ ಈ) ವಾರ
ಉ) ಉಪವಾಸ ಊ) ಭಂಗನೆ ಋ) ಕಾಡು ಎ) ನೀರೂರು
ಏ) ದೊರಕು ಐ) ಅಕ್ಷಯ

**೨. ಯಾವುದಾದರೂ ಐದು ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬರೆಯಿರಿ. ೨x೫=೧೦**

ಅ) ಹಣ್ಣನ್ನು ಆ) ರಾವಣ ಇ) ಪೇಟೆಗೆ ಈ) ಒಟ್ಟಿಗೆ
ಉ) ಆಕಾಶ ಊ) ಬೆಳೆಯುವ ಋ) ಮಟಮಟ
ಎ) ಕುಂಟುತ್ತ ಏ) ಸಮುದ್ರ ಐ) ಹನುಮಂತ

(ಪು.ತಿ.ನೋ.)



**೩. ಯಾವುದಾದರೊಂದು ಪದ್ಯಭಾಗವನ್ನು ಪೂರ್ಣಗೊಳಿಸಿ. ೧x೫=೫**

ಅ) ಬಾಳೆಯ ತೋಟದ.........................
..................................................
..................................................
................................ಒಂದುಪವಾಸವ ಮಾಡಿದವು

ಆ) ದೇವರ ಬಾಲಕನಾಗಲು ಒಲ್ಲೆ
..................................................
..................................................
...................................ಪೆಪ್ಪರಮೆಂಟೂ ಬೇಡಮ್ಮ

**III ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ೫x೪=೨೦**

ಅ) ಹುಡುಗ ಏನು ಮಾಡಿದ? ಅದರ ಪರಿಣಾಮವೇನು?

ಆ) ಅಮ್ಮ-ಕಂದನ ಆತ್ಮೀಯತೆಯನ್ನು 'ಅರ್ಧ ಚಂದ್ರ' ಪದ್ಯದಲ್ಲಿ ಕವಿ ಹೇಗೆ ಹೇಳಿದ್ದಾರೆ.

ಇ) ಬಾಳೆಹಣ್ಣನ್ನು ನೋಡಿದ ಕಪಿಗಳು ಏನು ಮಾಡಿದವು

ಈ) ಅಮ್ಮನ ಮನೆಗೆ ಹೊರಡೆಂದಾಗ ಹನುಮಂತುವಿನ ಉತ್ಸಾಹ ಹೇಗಿತ್ತು?

ಉ) ಪ್ರವಾಸಕ್ಕೆ ಹೊರಟ ಕಪಿಗಳು ಎಲ್ಲಿದ್ದವು? ಏನನ್ನು ಕಂಡವು.

ಊ) ಯಾವುದಾದರೂ ಎಂಟು ಲೇಖನ ಚಿಹ್ನೆಗಳನ್ನು ಬರೆದು ಹೆಸರಿಸಿ.

ಋ) ನಾಯಿಯು ಓಡಿಹೋಗಲು ಕಾರಣವೇನು?

**IV ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. ೨x೫=೧೦**

ಅ) 'ಹತ್ತು ಹತ್ತು ಇಪ್ಪತ್ತು' ಕವಿತೆಯ ಸಾರಾಂಶ ಬರೆಯಿರಿ

ಆ) ೧೫–೫೦ ವರೆಗಿನ ಅಂಕಿಗಳನ್ನು ಅಕ್ಷರಗಳಲ್ಲಿ ಬರೆಯಿರಿ.

ಇ) ಊಟದ ಆಟ ಪದ್ಯವನ್ನು ಬರೆದು ಸಾರಾಂಶವನ್ನು ವಿವರಿಸಿ.

ಈ) ಕಂದ ಪೆಪ್ಪರಮೆಂಟು ಬೇಡಮ್ಮಾ ಎನ್ನಲು ಕಾರಣವೇನು?

* * * *

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ಪ್ರವೇಶ ಪರೀಕ್ಷೆ – ೨೦೨೪

ಪ್ರಶ್ನೆಪತ್ರಿಕೆ – ೨

## ಭಾಷೆ ಮತ್ತು ಸಾಹಿತ್ಯ ಪರಿಚಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**ಭಾಗ – ೧**

**ಅ. ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. ೧x೧೦=೧೦**

೧) ನವಿಲುಕಲ್ಲು ಬೆಟ್ಟದಲ್ಲಿ ಮಳೆಗೆ ಸಿಕ್ಕಿಹಾಕಿಕೊಂಡ ಪ್ರಯಾಣಿಕರು ಯಾರು?
೨) ಕೊಠಡಿಯ ಗೋಡೆಯಲ್ಲಿ ತೂಗಿಯಾಕಿದ್ದ ಮಹಾಪುರುಷರ ಚಿತ್ರಗಳು ಯಾವುವು?
೩) ನೀರು ಮರಗಳನ್ನು ಕಂಡಲ್ಲಿ ಜನ ಏನು ಮಾಡುತ್ತಾರೆ?
೪) ರಾಜಸೂಯ ಯಜ್ಞದಲ್ಲಿ ರಾಜರು ಧರ್ಮರಾಯನಿಗೆ ಯಾವ ಕಾಣಿಕೆ ನೀಡಿದರು?
೫) ಕುವೆಂಪು ಅವರ ಪೂರ್ಣ ಹೆಸರನ್ನು ತಿಳಿಸಿ.
೬) ಎಲ್ಲಾನು ಬಲ್ಲೆವು ಎಂಬುವವರು ಏನನ್ನು ಬಿಡಲಿಲ್ಲ?
೭) ತ್ರಿಪದಿಯ ತ್ರಿವಿಕ್ರಮ ಎಂದು ಹೆಸರು ಪಡೆದವರು ಯಾರು?
೮) ಕನಸಿನಲ್ಲಿ ಹುಡುಗನನ್ನು ಕಾಡಿಗೆ ಕೊಂಡೊಯ್ದ ಪ್ರಾಣಿ ಯಾವುದು?
೯) ಅಜ್ಜಿಯ ಕೊಠಡಿಯನ್ನು ಆವರಿಸಿದ್ದ ಹಿತವಾದ ವಾಸನೆ ಯಾವುದು?
೧೦) ನವನಾಗರಿಕ ಸಮಾಜ ಯಾವ ಚಟಕ್ಕೆ ಬಲಿಯಾಗುತ್ತಿದೆ.?
೧೧) ತಮಿಳಿನಲ್ಲಿ ಜನ ಮೆಚ್ಚಿದ ಕವಿ ಯಾರು?
೧೨) ಕುವೆಂಪು ಎಲ್ಲಿ ಮತ್ತು ಯಾವಾಗ ಜನಿಸಿದರು?
೧೩) ಸ್ವಾಮಿ ಅಜ್ಜಿಗೆ ಯಾರ ವಿಚಾರವನ್ನು ಉತ್ಸಾಹದಿಂದ ಬಣ್ಣಿಸಿದ.

**ಆ. ಬಿಟ್ಟ ಸ್ಥಳದಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. ೧x೫=೫**

೧) ನವಿಲುಕಲ್ಲು ಬೆಟ್ಟ ಇರುವ ಸ್ಥಳ ................ (ತುಮಕೂರು, ತೀರ್ಥಹಳ್ಳಿ)
೨) ಭಕ್ತಿ ಭಂಡಾರಿ ಎಂದು ಹೆಸರಾದವರು............ (ಸರ್ವಜ್ಞ, ಬಸವಣ್ಣ)

(ಮು.ತಿ.ನೋ.)



೩) ನರಿಯಣ್ಣನಿಗಿದ್ದ ಕೋಡುಗಳ ಸಂಖ್ಯೆ .............( ನಾಲ್ಕು, ಎರಡು)
೪) ಮೊಲಗಳು ಹುಡುಗನಿಗೆ .......... ಹೇಳಿದವು (ಕಥೆ, ಹಾಡು)
೫) ಮಹಾಭಾರತವನ್ನು ಬರೆದವರು ..........(ವಾಲ್ಮೀಕಿ, ವ್ಯಾಸ)

**ಇ ಹೊಂದಿಸಿ ಬರೆಯಿರಿ. ೧x೫=೫**

| | |
|---|---|
| ೧) ಕುವೆಂಪು | ೧) ಮಂತ್ರವಾದಿ |
| ೨) ತ್ರಿಪದಿ | ೨) ಅಧರ್ಮ |
| ೩) ಗಾರುಡಿಗ | ೩) ಕೀರ್ತನೆಗಳು |
| ೪) ಧರ್ಮ | ೪) ಮೂರು ಸಾಲುಗಳ ಪದ್ಯ |
| ೫) ಪುರಂದರದಾಸರು | ೫) ಶ್ರೀ ರಾಮಾಯಣ ದರ್ಶನಂ |

**ಈ. ಯಾವುದಾದರೂ ಎರಡು ಪದ್ಯಗಳ ಸಾರಾಂಶವನ್ನು ಬರೆಯಿರಿ. ೨x೫=೧೦**

೧. ಕಳಬೇಡ, ಕೊಲಬೇಡ
ಹುಸಿಯ ನುಡಿಯಲು ಬೇಡ, ಮುನಿಯಬೇಡ
ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗನನೊಲಿಸುವ ಪರಿ

೨. ಕಾವಿಯನುಟ್ಟು ತಿರುಗುವಿರೆಲ್ಲ ಕಾಮವ ಬಿಡಲಿಲ್ಲ
ನೇಮ ನಿಷ್ಠೆಗಳ ಮಾಡುವರೆಲ್ಲ ತಾಮಸ ಬಿಡಲಿಲ್ಲ
ತಾವೊಂದರಿಯದೆ ಪರರನು ತಿಳಿಯದೆ
ಶ್ವಾನನ ಕುಳಿಯಲಿ ಬೀಳುವಿರಲ್ಲ.

೩. ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು
ಮಾತ ತಾನರಿಯದಧಮಂಗೆ ಮಾಣಿಕವು
ತೂತುಬಿದ್ದಂತೆ ಸರ್ವಜ್ಞ

**ಉ. ಯಾವುದಾದರೂ ಐದಕ್ಕೆ ಟಿಪ್ಪಣಿ ಬರೆಯಿರಿ. ೫x೨=೧೦**

೧) ಕುವೆಂಪು ೨) ಧರ್ಮರಾಯ ೩) ಸರ್ವಜ್ಞ
೪) ಆರ್. ಕೆ. ನಾರಾಯಣ್ ೫) ಪಟ್ಟೆಹುಲಿ ೬) ಶಕುನಿ
೭) ಕೂಡಲಸಂಗಮದೇವ

(ಮು.ತಿ.ನೋ.)

**ಊ. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ವಿವಿರವಾದ ಉತ್ತರ ಬರೆಯಿರಿ. ೪x೫=೨೦**

೧) ಗುಬ್ಬಕ್ಕ ಅತಿಥಿಗಳನ್ನು ಹೇಗೆ ಉಪಚರಿಸಿದಳು?

೨) ಕೃಷ್ಣಮೂರ್ತಿ ಮೇಷ್ಟ್ರು ಒಳ್ಳೆಯವರು ಎನ್ನಲು ಕಾರಣವೇನು?

೩) ಗಾಂಧೀಜಿಯ ವಾಣಿ ಮಕ್ಕಳಿಗೆ ಏನು ಹೇಳಿತು?

೪) ದುರ್ಯೋಧನನಿಗೆ ಶಕುನಿ ಹೇಳಿಕೊಟ್ಟ ಉಪಾಯವೇನು?

೫) ಕುವೆಂಪು ಅವರ ಬಾಲ್ಯ ಹೇಗೆ ರೂಪುಗೊಂಡಿತು?

೬) ಅಪ್ಪನಿಗೆ ಸಿಟ್ಟುಬರಲು ಕಾರಣವೇನು? ಅದರ ಪರಿಣಾಮವೇನಾಯಿತು?

೭) ಸ್ವಾಮಿ ಅಜ್ಜಿಗೆ ಹೇಳಿದ ಕಥೆ ಯಾವುದು?

## ಭಾಗ – ೨

**ಅ. ಯಾವುದಾದರೂ ನಾಲ್ಕಕ್ಕೆ ಅರ್ಥ ಬರೆಯಿರಿ. ೪x೧=೪**

ಸೊಲ್ಲು, ಅಗಣಿ, ತಕಲಿ, ಬಣ್ಣಿಸು, ನನ್ನಿ, ಜಳಕ

**ಆ. ಯಾವುದಾದರೂ ನಾಲ್ಕಕ್ಕೆ ನಾನಾರ್ಥಗಳನ್ನು ಬರೆಯಿರಿ. ೪x೧=೪**

ಮುನಿ, ನವ, ಹಳಿ, ಬಟ್ಟೆ , ಹರಿ

**ಇ. ಯಾವುದಾದರೂ ನಾಲ್ಕನ್ನು ಬಿಡಿಸಿ ಬರೆಯಿರಿ. ೪x೧=೪**

ಅರಮನೆ, ಮನೆಯನ್ನು , ಜಾಗವಿಲ್ಲ, ಮಿಂಚಿನುಂಡೆ, ಹಣದಾಸೆ, ಊರಲ್ಲಿ

**ಈ. ಯಾವುದಾದರೂ ನಾಲ್ಕನ್ನು ಸೇರಿಸಿ ಬರೆಯಿರಿ. ೪x೧=೪**

ತುಂಡು + ಕಂಬಳಿ ಹಿಂಡನು + ಅಗಲಿದ ಗಟ್ಟಿ + ಅನ್ನು

ಮೈ + ತಳೆದುದು ಮೂರು + ಹತ್ತು ಮರ + ಅನ್ನು

**ಉ. ಯಾವುದಾದರೂ ನಾಲ್ಕಕ್ಕೆ ಮೂಲ ಧಾತುಗಳನ್ನು ಗುರುತಿಸಿ ೪x೧=೪**

ಅಳುತ್ತಿತ್ತು ಕೇಳುವರು ಎದ್ದರು ಮಿಂಚಿತು ಬಿದ್ದವು ಕೊಡು

**ಊ. ಕಾರ, ವಂತ ಎಂದು ಕೊನೆಯಾಗುವ ಎರಡೆರಡು ಪದಗಳನ್ನು ಬರೆಯಿರಿ ೪x೧=೪**

(ಪು.ತಿ.ನೋ.)

ಪ್ರ/೨

**ಋ. ಈ ಕ್ರಿಯಾಪದಗಳ ವಚನವನ್ನು ಬದಲಾಯಿಸಿ ಬರೆಯಿರಿ. ೪x೧=೪**

ಬರುತ್ತಿದ್ದಾನೆ ಕೇಳುತ್ತಾಳೆ

ಹೇಳಿದವು ಬಿಟ್ಟವು

**ೠ. ಸೂಚನೆಗೆ ಅನುಗುಣವಾಗಿ ವಾಕ್ಯರಚನೆ ಮಾಡಿ. ೪x೧=೪**

೧) 'ಅಲ್ಲ' ಎಂಬ ಉತ್ತರ ಬರುವಂತೆ ಪ್ರಶ್ನೆಯನ್ನು ರೂಪಿಸಿ.

೨) 'ನಾವು ಎಲ್ಲರೂ ಒಟ್ಟಾಗಿ ಬರುತ್ತಿದ್ದೆವು'– ಇದನ್ನು ಪ್ರಥಮ ಪುರುಷದಲ್ಲಿ ಬರೆಯಿರಿ.

೩) ಜಗದೀಶ ನಗರಕ್ಕೆ ಬಂದನು, ಆಗ ಬಹಳ ತಡವಾಗಿತ್ತು – ಇದನ್ನು ಒಂದು ವಾಕ್ಯವಾಗಿ ಬರೆಯಿರಿ.

೪) ಮನೆಯಲ್ಲಿ ಜನರು ತುಂಬಿದ್ದರೂ, ಯಾರು ಮಾತನಾಡಲಿಲ್ಲ ಇದರಲ್ಲಿನ ಮೂಲ ವಾಕ್ಯಗಳನ್ನು ಗುರುತಿಸಿ.

**ಎ. ಎರಡು ಪ್ರಶ್ನೆಗಳಿಗೆ ಉತ್ತರಿಸಿ. ೨x೪=೮**

೧) ಆದೇಶಸಂಧಿ ಎಂದರೇನು? ಉದಾಹರಣೆಯೊಂದಿಗೆ ಪರಿಚಯಿಸಿ.

೨) ಕರ್ತೃ, ಕ್ರಿಯಾ ಪದಕ್ಕೂ ಇರುವ ಸಂಬಂಧವನ್ನು ಉದಾಹರಣೆಗಳೊಂದಿಗೆ ತಿಳಿಸಿ.

೩) ಮೂರು ಬಗೆಯ ನಿರೂಪಣೆಗಳನ್ನು ಪರಿಚಯಿಸಿ.

* * * *